# ಮತ್ತೆ ಮಾಲಾಶ್ರೀ



'ಆಯುಧ ಪೂಜೆ'ಗೆ ಮೊದಲೇ ಕನ್ನಡ ಚಿತ್ರರಂಗದಲ್ಲೊಂದು ಹಿತಕರ ಘರ್ಷಣೆ ಹೆಚ್ಚೇನೂ ಸದ್ದಿಲ್ಲದೆ ಶುರುವಾಗಿದೆ. ಅಂದ ಹಾಗೆ, ಈ 'ಘರ್ಷಣೆ' ಚಿತ್ರದ ಹೆಸರು. ಮದುವೆಯ ನಂತರ ಸ್ವಂತ ಬ್ಯಾನರ್ ಚಿತ್ರಗಳಿಗಷ್ಟೇ ಸೀಮಿತವಾಗಿದ್ದ ನಟಿ ಮಾಲಾಶ್ರೀ, ಸುಮಾರು ಒಂದೂವರೆ ದಶಕದ ನಂತರ ಪಾತ್ರ ನಿರ್ವಹಿಸುತ್ತಿರುವ ಬೇರೆ ಬ್ಯಾನರ್‌ನ ಚಿತ್ರವಿದು. ಶಂಕರೇಗೌಡ ನಿರ್ಮಿಸುತ್ತಿರುವ ಈ ಚಿತ್ರವನ್ನು ದಯಾಳ್ ಪದ್ಮನಾಭನ್ ನಿರ್ದೇಶಿಸುತ್ತಿದ್ದಾರೆ.

'ಘರ್ಷಣೆ'ಯ ಆರಂಭದ ಹಿನ್ನೆಲೆಯಲ್ಲಿ ಎರಡು ಎಳೆಗಳಿವೆ. ಒಂದು ಮಾಲಾಶ್ರೀ ಅವರದ್ದು, ಮತ್ತೊಂದು ದಯಾಳ್ ಅವರದ್ದು. 'ನಾಯಕರ ಸಂಭಾವನೆ ದುಬಾರಿ. ಅವರ ಕಾಲ್‌ಶೀಟ್ ಬೇಕೆಂದರೆ ಸಾಕಷ್ಟು ಕಾಲ ಕಾಯಬೇಕು. ಹಾಗಾಗಿ ನಾಯಕಿಯರನ್ನು ನೆಚ್ಚಿಕೊಳ್ಳುವುದೇ ಒಳ್ಳೆಯದು' ಎನ್ನುವ ಜ್ಞಾನೋದಯ ಆಗಿದ್ದೇ ತಡ, ದಯಾಳ್ ತಾರಾ ವರ್ಚಸ್ಸಿನ ನಾಯಕಿಯ ತಲಾಷಿಗೆ ತೊಡಗಿದ್ದಾರೆ. ಆಗ ಅವರ ಕಣ್ಣಿಗೆ ಬಿದ್ದದ್ದು ಮಾಲಾಶ್ರೀ. ಆದರೆ, ಆಕೆ ಅಂತಃಪುರದೊಳಗೆ ತಣ್ಣಗಿದ್ದರಲ್ಲ. 'ಒಳ್ಳೆಯ ಕಥೆ ಇದ್ದರೆ ಹೇಳಿ. ಬೇರೆ ಬ್ಯಾನರ್ ಚಿತ್ರವಾದರೂ ಪರವಾಗಿಲ್ಲ' ಎಂದು ಮೇಡಂ ಹೇಳಿದ್ದು ದಯಾಳ್ ಆಸೆಯನ್ನು ಚಿಗುರಿಸಿದೆ. ಸಮಕಾಲೀನ ಪ್ರಸಂಗವೊಂದಕ್ಕೆ ಸಿನಿಮಾ ಕಥೆಯ ರೂಪ ನೀಡಿ ಅವರು ಹೇಳಿದ ಕಥೆ ಮಾಲಾಶ್ರೀ ಅವರಿಗೆ ಇಷ್ಟವಾಗಿದ್ದೆ. ಹಾಗಾಗಿ, 'ಘರ್ಷಣೆ' ಶುರುವಾಗಿದೆ.

ಮಾಲಾಶ್ರೀ ನಾಯಕಿ ಎಂದ ಮೇಲೆ ಮಾರಾಮಾರಿ ಇರಲೇಬೇಕಲ್ಲ. 'ಘರ್ಷಣೆ' ಸಂಪೂರ್ಣ ಸಾಹಸಮಯ ಚಿತ್ರ. ಹಾಗೆ ನೋಡಿದರೆ ದಯಾಳ್‌ಗೆ ಸಾಹಸ ಹೊಸತೇನಲ್ಲ. ಅವರು ನಿರ್ದೇಶಿಸಿರುವುದು ಹಾಸ್ಯಪ್ರಧಾನ ಚಿತ್ರಗಳಾದರೂ, ಆ ಚಿತ್ರಗಳ ಹಿಂದಿನ ನಿರ್ದೇಶಕರದ್ದು ಸಾಹಸ ಪ್ರವೃತ್ತಿಯೇ. ಆ ಮನೋಭಾವವನ್ನು ಈಗ ತೆರೆಯಲ್ಲೂ ತೋರಲು ಅವರು ಸಿದ್ಧರಾಗಿದ್ದಾರೆ. ಅರ್ಜುನ್ ಜನ್ಯ 'ಘರ್ಷಣೆ'ಯ ಸಂಗೀತ ನಿರ್ದೇಶಕರು. ಪತ್ರಕರ್ತ ಶ್ಯಾಮ್ ಸಂಭಾಷಣೆ ಬರೆದಿದ್ದಾರೆ.



# ಕೌಟುಂಬಿಕ 'ಸ್ವೀಟಿ'

ಮಾಲಾಶ್ರೀ 'ಘರ್ಷಣೆ'ಗೆ ಸಜ್ಜಾಗಿರುವ ಸಂದರ್ಭದಲ್ಲೇ, ಆರು ವರ್ಷಗಳ ನಂತರ ನಟಿ ರಾಧಿಕಾ ನಾಯಕಿಯಾಗಿ ಮತ್ತೆ ಬಣ್ಣ ಹಚ್ಚಿಕೊಂಡಿದ್ದಾರೆ. 'ಸ್ವೀಟಿ–ನನ್ನ ಜೋಡಿ' ಎಂದು ಡುಯೆಟ್ ಹಾಡಲು ಸಜ್ಜಾಗಿದ್ದಾರೆ.

ಗೃಹಸ್ಥಾಶ್ರಮದ ನಂತರ ತೆರೆಮರೆಗೆ ಸರಿದಿದ್ದ ರಾಧಿಕಾ, 'ಗಂಡ ಮನೆ ಮಕ್ಕಳು' ಎಂದು ಬಿಡುವು ಕಳೆದುಕೊಂಡಿದ್ದರು. ಆದರೆ, 'ಅಭಿಮಾನಿ ದೇವರುಗಳು' ಸುಮ್ಮನಿರಬೇಕಲ್ಲ! 'ನೀವು ನಟಿಸಲೇಬೇಕು' ಎಂದು ಪಟ್ಟು ಹಿಡಿದಿದ್ದರಿಂದ ಅವರು ಮತ್ತೆ ನಟಿಸುತ್ತಿದ್ದಾರೆ. 'ತಮ್ಮ ಅನನ್ಯ ಅಭಿನಯ ಪ್ರತಿಭೆ ಹಾಗೂ ನೃತ್ಯ ಪ್ರತಿಭೆ ವೃಥಾ ನಷ್ಟವಾಗಬಾರದು' ಎನ್ನುವ ಕಲಾ ಪ್ರೀತಿ ಕೂಡ ಅವರು ನಟಿಸಲು ಮುಂದಾಗಿರುವುದಕ್ಕೆ ಇನ್ನೊಂದು ಕಾರಣ.

'ಸ್ವೀಟಿ' ರಾಧಿಕಾ ಅವರ ಕುಟುಂಬ ನಿರ್ಮಿಸುತ್ತಿರುವ ಚಿತ್ರ. ವಿಜಯಲಕ್ಷ್ಮಿ ಸಿಂಗ್ ಚಿತ್ರದ ನಿರ್ದೇಶಕಿ. ಸಿಂಗ್ ಕುಟುಂಬಕ್ಕೆ ಸೇರಿದ ಆದಿತ್ಯ ಚಿತ್ರದ ನಾಯಕ. ಹಾಗಾಗಿ, 'ಸ್ವೀಟಿ'ಯನ್ನು ಅಕ್ಷರಶಃ 'ಕೌಟುಂಬಿಕ ಚಿತ್ರ' ಎನ್ನಬಹುದು.

ಅಂದ ಹಾಗೆ, ಇನ್ನು ಮುಂದೆ ನಿಯಮಿತವಾಗಿ ಚಿತ್ರಗಳಲ್ಲಿ ನಟಿಸುವ ಮೂಲಕ ಅಭಿಮಾನಿಗಳ ಇಷ್ಟಾರ್ಥ ನೆರವೇರಿಸಲು ರಾಧಿಕಾ ಸಂಕಲ್ಪ ಮಾಡಿದ್ದಾರೆ. ಅವರ ಮುಂದಿನ ಯೋಜನೆಗಳಲ್ಲಿ ತೆಲುಗಿನ ಕೋಡಿ ರಾಮಕೃಷ್ಣ ನಿರ್ದೇಶನದ ಒಂದು ಚಿತ್ರವೂ, 'ಅಣ್ಣತಂಗಿ' ಖ್ಯಾತಿಯ ಶಿವರಾಜ್‌ಕುಮಾರ್ ಅವರೊಂದಿಗೆ ಮತ್ತೊಂದು ಚಿತ್ರವೂ ಸೇರಿವೆ.

■ ರಘು